# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಡಾ: ಚಂದ್ರಶೇಖರ್ ಬಿ. ಪಾಟೀಲ್ (ಪದವೀಧರರ ಕ್ಷೇತ್ರ) |
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 715 |
| ಉತ್ತರಿಸಬೇಕಾದ ದಿನಾಂಕ | : | 22.02.2023 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಏಪ್ರಿಲ್–2022 ರಿಂದ ಇಲ್ಲಿಯವರೆಗೆ ಅನುಗ್ರಹ ಯೋಜನೆ ಕುರಿ ಸಾಕಾಣಿಕೆದಾರರಿಗೆ ಪರಿಹಾರ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಏಪ್ರಿಲ್ 2022ರಿಂದ ಇಲ್ಲಿಯವರೆಗೆ ಅನುಗ್ರಹ ಯೋಜನೆ ಕುರಿ ಸಾಕಾಣಿಕೆದಾರರಿಗೆ ಪರಿಹಾರ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ | ಬಂದಿದ್ದಲ್ಲಿ, ಸರ್ಕಾರ ಇಲ್ಲಿಯವರೆಗೆ ಪರಿಹಾರ ನೀಡದಿರಲು ಕಾರಣವೇನು; | ಸದರಿ ಯೋಜನೆಗೆ ಅನುದಾನ ಬಿಡುಗಡೆಯಾಗಿರುವುದಿಲ್ಲ. ಈ ಬಗ್ಗೆ ಅನುದಾನ ಬಿಡುಗಡೆ ಮಾಡುವ ಪ್ರಸ್ತಾವನೆ ಆರ್ಥಿಕ ಇಲಾಖೆಯಲ್ಲಿ ಪರಿಶೀಲನೆಯಲ್ಲಿದೆ. |
| ಇ | ಪರಿಹಾರ ಸಂಬಂಧ ಸರ್ಕಾರದಿಂದ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದು ಅದನ್ನು ನಿಗಮಕ್ಕೆ ವಾಪಸ್ಸು ಕಳುಹಿಸಲು ಕಾರಣವೇನು; ಈ ಯೋಜನೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸದರಿ ಪ್ರಸ್ತಾವನೆಗೆ ಯಾವ ಕಾಲಮಿತಿಯಲ್ಲಿ ಅನುಮೋದನೆ ನೀಡುವುದು ಯಾವಾಗ? (ವಿವರ ಒದಗಿಸುವುದು) | ಆರ್ಥಿಕ ಇಲಾಖೆಗೆ ಸಲ್ಲಿಸಿದ್ದ ಪ್ರಸ್ತಾವನೆಯನ್ನು ಕೆಳಕಂಡ ಅಂಶಗಳಿಗೆ ಮಾಹಿತಿ/ಸ್ಪಷ್ಟೀಕರಣ ಕೋರಿ ಹಿಂದಿರುಗಿಸಲಾಗಿರುತ್ತದೆ.<br>1. 2019–20ನೇ ಸಾಲಿನಲ್ಲಿ ಎಷ್ಟು ಫಲಾನುಭವಿಗಳಿಗೆ ಪರಿಹಾರವನ್ನು ಪಾವತಿಸಲಾಗಿದೆ ಮತ್ತು ಪ್ರತಿ ಫಲಾನುಭವಿಗೆ ಪಾವತಿಸಲಾದ ಪರಿಹಾರ ಮೊತ್ತ ಪ್ರಮಾಣದ ವಿವರ<br>2. 2022–23ನೇ ಸಾಲಿಗೆ ಕ್ಲೈಂ ಅರ್ಜಿಗಳನ್ನು ಸ್ವೀಕರಿಸಲು ಸರ್ಕಾರದ/ಆರ್ಥಿಕ ಇಲಾಖೆಯ ಸಹಮತಿಯನ್ನು ಪಡೆಯಲಾಗಿದೆಯೇ ಎಂಬ ಬಗ್ಗೆ ಮಾಹಿತಿ<br>3. ಸದರಿ ಯೋಜನೆಯಡಿ ಕಳೆದ 5 ವರ್ಷಗಳಲ್ಲಿ ಸ್ವೀಕೃತವಾಗಿರುವ ಕ್ಲೈಂ ಅರ್ಜಿಗಳ ಮಾಹಿತಿ<br>4. 2021–22ನೇ ಸಾಲಿನ ಕ್ಲೈಂಗಳ ಇತ್ಯರ್ಥಕ್ಕಾಗಿ ಇಲಾಖೆಯು ಪ್ರಸ್ತಾಪಿಸಿದಂತೆ ರೂ.12.00 ಕೋಟಿಗಳನ್ನು ಒದಗಿಸಲಾಗಿದ್ದು ಪ್ರಸ್ತುತ 2021–22ನೇ ಸಾಲಿನ ಬಾಕಿ ಇರುವ ಕ್ಲೈಂಗಳ ಇತ್ಯರ್ಥಕ್ಕಾಗಿ ರೂ.14.94 ಕೋಟಿಗಳ ಹೆಚ್ಚುವರಿ ಅನುದಾನಕ್ಕಾಗಿ ಪ್ರಸ್ತಾಪಿಸಿದ್ದು ಇದಕ್ಕೆ ಕಾರಣ ಒದಗಿಸುವುದು.<br>ಸದರಿ ಸ್ಪಷ್ಟೀಕರಣಕ್ಕೆ ಸಂಬಂಧಪಟ್ಟಂತೆ ಜಿಲ್ಲಾವಾರು ಮಾಹಿತಿ ಪಡೆದು ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಮರುಸಲ್ಲಿಸಲಾಗಿದೆ.<br>ಹೌದು, ಈ ಯೋಜನೆ ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>2022–23ನೇ ಸಾಲಿನ ಅನುದಾನ ಅನುಮೋದನೆಗೊಂಡು ಬಿಡುಗಡೆಯ ನಂತರ ಇತ್ಯರ್ಥಗೊಳಿಸಲಾಗುತ್ತದೆ. |

ಇ–ಪಸಂಮೀ 55 ಸಲೆವಿ 2023

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ ಸಚಿವರು